# ೧೧. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸೇವೆ

ರಾಜಕೀಯ, ಸಾಮಾಜಿಕ ಸೇವೆಯ ಅನುಭವ ಹೊಂದಿದ ಆರ್.ವಿ.ಬಿಡಪ ಅವರಿಗೆ ನಾಡು-ನುಡಿಯ ಸೇವೆ ಮಾಡಬೇಕೆಂಬ ಹಂಬಲ ಇತ್ತು. ಅವರ ಈ ಹಂಬಲಕ್ಕೆ ಒದಗಿದ ಅವಕಾಶವೆಂಬಂತೆ ಅಂದಿನ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯ ಸಚಿವ ವೀರೇಂದ್ರ ಪಾಟೀಲರು ಗುಲಬರ್ಗಾಕ್ಕೆ ಬಂದಾಗ ಸಹಜವಾಗಿ ಆರ್.ವಿ.ಬಿಡಪನವರು ಅವರಿಗೆ ಸಂಪರ್ಕಿಸುತ್ತಾರೆ. ಆಗ ಪಾಟೀಲರು ಹಲವು ಕ್ಷೇತ್ರಗಳಲ್ಲಿ ಗಟ್ಟಿ ಅನುಭವ ಪಡೆದ ಆರ್.ವಿ.ಬಿಡಪನವರಿಗೆ ಖಾದಿ ಬೋರ್ಡ್ ಅಧ್ಯಕ್ಷರಾಗಿ, ಹೈಕೋರ್ಟ್ ನ್ಯಾಯಾಧೀಶರಾಗಿ ಅಥವಾ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಲು ಸೂಚಿಸುತ್ತಾರೆ. ಆಗ ಆರ್.ವಿ.ಬಿಡಪನವರು ಕೇಳಿ ಸುಮ್ಮನಾಗುತ್ತಾರೆ. ಏಕೆಂದರೆ ಕಾಂಗ್ರೆಸ್ ಪಕ್ಷದ ಟಿಕೆಟ್ ಪಡೆದು ಶಾಸಕರಾಗಿ ಆಯ್ಕೆಯಾಗುವ ಇಚ್ಛೆ ಇವರದಾಗಿತ್ತು. ಮುಂದೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪನವರು ಆರ್.ವಿ.ಬಿಡಪನವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಲು ಸೂಚಿಸಿದಾಗ ತಕ್ಷಣ ಒಪ್ಪಿ ದಿನಾಂಕ 20-03-1967 ರಂದು ಆಯೋಗದ ಸದಸ್ಯರಾಗುತ್ತಾರೆ. ಆಗ ತಾವೇ ಬೀದರದಲ್ಲಿ ಸಂಸ್ಥಾಪಿಸಿದ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ. ಒಬ್ಬ ವ್ಯಕ್ತಿ, ಒಂದು ಸ್ಥಾನದಲ್ಲಿ ಇದ್ದು ಕರ್ತವ್ಯ ನಿರ್ವಹಿಸುವುದು ಸೂಕ್ತ ಎನ್ನುವ ಸೂಕ್ಷ್ಮವಾದ ಕರ್ತವ್ಯ ಪ್ರಜ್ಞೆ ಆರ್.ವಿ.ಬಿಡಪನವರಲ್ಲಿ ಇತ್ತು ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಆದರೆ ಶಿಕ್ಷಣ ಸಂಸ್ಥೆಯು ಇವರ ರಾಜೀನಾಮೆಯನ್ನು ಅಂಗೀಕರಿಸುವುದಿಲ್ಲ.

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ಆರ್.ವಿ.ಬಿಡಪನವರು ಕಾರ್ಯನಿರ್ವಹಿಸುತ್ತಿರುವಾಗ ಅಂದಿನ ಆಯೋಗದ ಅಧ್ಯಕ್ಷರಾಗಿದ್ದ ಚೆನ್ನಿಗರಾಮಯ್ಯನವರು ದಿನಾಂಕ 15-02-1969 ರಂದು ನಿವೃತ್ತರಾಗುತ್ತಾರೆ. ಅಧ್ಯಕ್ಷ ಸ್ಥಾನವು ಇವರ ನಿವೃತ್ತಿಯಿಂದಾಗಿ ತೆರವುಗೊಳ್ಳುತ್ತದೆ. ಆಗ ಆರ್.ವಿ.ಬಿಡಪನವರಿಗೆ ಕೂಡಲೇ ಆಯೋಗದ ಅಧ್ಯಕ್ಷರಾಗಿ ಕರ್ನಾಟಕ ಸರಕಾರ ನೇಮಕ ಮಾಡಿ ಹಿಂದಿನ ಅಧ್ಯಕ್ಷರ ಬೀಳ್ಕೊಡುಗೆ ಮತ್ತು ಹೊಸದಾಗಿ ನೇಮಕಗೊಂಡ ಅಧ್ಯಕ್ಷರನ್ನು ಸ್ವಾಗತಿಸಲು

Scanned with CamScanner

ಬೆಂಗಳೂರಿನ ಸರಕಾರಿ ಕಾನೂನು ಮಹಾವಿದ್ಯಾಲಯದಲ್ಲಿ ಸತ್ಕಾರ ಸಮಾರಂಭ ಏರ್ಪಡಿಸಿದರು. ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನ ಅಲಂಕರಿಸಿದ ಆರ್.ವಿ.ಬಿಡಪನವರು ತಕ್ಷಣವೇ ಆಯೋಗದ ಆಡಳಿತ ವೈಖರಿಯನ್ನೇ ಬದಲಿಸುತ್ತಾರೆ. ನಂಜರಾಜ ಅರಸರ ನಿವೃತ್ತಿಯಿಂದಾಗಿ ತೆರವುಗೊಂಡ ಸ್ಥಾನದಲ್ಲಿ ಪ್ರಾಧ್ಯಾಪಕ ಟಿ.ರೂಬೆನ್ ಅವರನ್ನು ಮತ್ತು ಹಿರಿಯ ಸದಸ್ಯ ಮರಿದೇವಗೌಡ ನಿವೃತ್ತಿಯಾಗಿ ತೆರವುಗೊಂಡ ಸ್ಥಾನದಲ್ಲಿ ಟಿ.ವಿ.ರೆಡ್ಡಿ ಅವರನ್ನು ಕ್ರಮವಾಗಿ ನೇಮಕ ಮಾಡುತ್ತಾರೆ. ಕೇವಲ ಐದು ಜನ ಸದಸ್ಯರನ್ನೊಳಗೊಂಡ ಲೋಕಸೇವಾ ಆಯೋಗದಲ್ಲಿ ಹೆಚ್ಚುವರಿಯಾಗಿ ಇಬ್ಬರು ಸದಸ್ಯರನ್ನು ಸೇರಿಸಿ ಒಟ್ಟು ತಮ್ಮ ಅಧ್ಯಕ್ಷತೆಯ ಅಧಿಕಾರಾವಧಿಯಲ್ಲಿ ಏಳು ಜನ ಸದಸ್ಯರಿರುವಂತೆ ಬದಲಾವಣೆ ತರುತ್ತಾರೆ. ಆ ಏಳು ಜನ ಸದಸ್ಯರೆಂದರೆ ಪ್ರೊ.ಟಿ.ರೂಬೆನ್, ಭರಣಯ್ಯ, ವಿ.ಹನುಮಂತಪ್ಪ, ದುಗ್ಗಪ್ಪ, ಮರಿಯಪ್ಪ, ಮಲ್ಲರಾಜೆಅರಸ ಮತ್ತು ಬಿ.ಕೆ.ಅಶ್ವತ ಅವರಾಗಿದ್ದರು. ಇವರಲ್ಲಿ ಮೂರು ಜನ ಐ.ಎ.ಎಸ್. ಅಧಿಕಾರಿಗಳಾಗಿದ್ದರು. ಹಿಂದುಳಿದ ವರ್ಗಕ್ಕೆ ಸೇರಿದ ಬಿ.ಕೆ.ಅಶ್ವತ ಅವರು ಆರ್.ವಿ.ಬಿಡಪನವರ ಆಪ್ತ ಕಾರ್ಯದರ್ಶಿಯಾಗಿದ್ದರು.

ಆರ್.ವಿ.ಬಿಡಪನವರ ಅಧ್ಯಕ್ಷತೆಯಲ್ಲಿ ಲೋಕಸೇವಾ ಆಯೋಗದಲ್ಲಿ ಎಲ್ಲ ರೀತಿಯ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಪ್ರಾದೇಶಿಕತೆ, ಜಾತೀಯತೆ ಮುಂತಾದವುಗಳಿಂದ ಮುಕ್ತವಾಗಿಸಿ ಜನಸಾಮಾನ್ಯರಲ್ಲಿ ಲೋಕಸೇವಾ ಆಯೋಗದ ಬಗ್ಗೆ ದೃಢವಾದ ನಂಬಿಕೆ ಹುಟ್ಟುವಂತೆ ನೋಡಿಕೊಳ್ಳುತ್ತಾರೆ. ಕೇವಲ ಹಳೆಯ ಮೈಸೂರು ಭಾಗದವರಿಗೆ ಅಗ್ರಪಟ್ಟ ಇರುತ್ತದೆ ಎಂಬ ಪೂರ್ವಗ್ರಹ ಕಲ್ಪನೆ ಉತ್ತರ ಕರ್ನಾಟಕ ಜನರಲ್ಲಿ ಆಳವಾಗಿ ಬೇರೂರಿದ್ದನ್ನು ತೆಗೆಯಲು ತಮ್ಮ ಕಾರ್ಯಸಾಧನೆಯಿಂದ ಸಿದ್ಧಮಾಡಿ ತೋರಿಸಿದರು. ಎಲ್ಲಾ ಜಿಲ್ಲಾ ಹಾಗೂ ವಿಭಾಗ ಕೇಂದ್ರಗಳಲ್ಲಿ ಮೌಖಿಕ ಹಾಗೂ ಲಿಖಿತ ಪರೀಕ್ಷೆಗಳನ್ನು ನಡೆಸುವುದು, ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಶಿಕ್ಷಕರನ್ನು ಪರೀಕ್ಷಕರೆಂದು ನೇಮಿಸುವುದು, ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ರಾಜ್ಯದ ಹೊರಗೆ ಮುದ್ರಿಸುವುದು, ಪರೀಕ್ಷಾ ವಿಭಾಗ ಎಲ್ಲಾ ಹೊಣೆಗಾರಿಕೆಯನ್ನು ಅಧ್ಯಕ್ಷರೇ ವಹಿಸುವುದು ಇವೇ ಮೊದಲಾದ ವಿಧಾನಗಳಿಂದ ಲೋಕಸೇವಾ ಆಯೋಗ ಸ್ವಚ್ಛ ಭ್ರಷ್ಟಾಚಾರ ಮುಕ್ತ ಸಂಸ್ಥೆಯನ್ನಾಗಿ ಪರಿವರ್ತಿಸಿದರು. ರಾಜ್ಯದ ಎಲ್ಲಾ ಭಾಗಗಳಿಗೆ ನ್ಯಾಯ ಸಿಗುವಂತೆ ಮತ್ತು ಜನರ ನೇಮಕಾತಿ ಆಗುವಂತೆ ಆರ್.ವಿ.ಬಿಡಪನವರು ನೋಡಿಕೊಂಡರು. ಈ ಕಾರ್ಯವನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಸ್ವತಃ ವೀಕ್ಷಿ ಅಂಕಿಅಂಶಗಳ ಮಾಹಿತಿಯನ್ನು ಶಾಸನಸಭೆಯಲ್ಲಿ ಸಾದರಪಡಿಸಿ ಆರ್.ವಿ.ಬಿಡಪನವ ಕಾರ್ಯವೈಖರಿಯನ್ನು ಪರಿಚಯಿಸುತ್ತಾರೆ. ಸರಕಾರಿ ನೌಕರರ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಸರಕಾರ ಪ್ರತ್ಯೇಕವಾದ ಸಲಹಾ ಸಮಿತಿಯನ್ನು ಆರಂಭಿಸಿ ಅದ ಆರ್.ವಿ.ಬಿಡಪನವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತದೆ. ಇದನ್ನು ವಿರೋಧಿ ಬಸವಲಿಂಗಪ್ಪ ಮತ್ತು ನಾಯ್ಕರರು ಅಂದಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರ ಅವರನ್ನು ಸಂಪರ್ಕಿಸುತ್ತಾರೆ. ಆರ್.ವಿ.ಬಿಡಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡ

Scanned with CamScan

ದೆಂದು ಒತ್ತಾಯಿಸುತ್ತಾರೆ. ಆದರೆ ದೇವರಾಜ ಅರಸ್‌ರು ಇವರ ಒತ್ತಾಯಕ್ಕೆ ಮಣಿಯದೆ ಸಲಹಾ ಮಂಡಳಿಯ ಅಧ್ಯಕ್ಷರನ್ನಾಗಿ ಆರ್.ವಿ.ಬಿಡಪನವರನ್ನು ಮುಂದುವರೆಯಲು ಸೂಚಿಸುತ್ತಾರೆ.

ಆರ್.ವಿ.ಬಿಡಪನವರ ಅಧ್ಯಕ್ಷತೆಯಲ್ಲಿ ಗುಲಬರ್ಗಾದ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ಐ.ಎ.ಎಸ್. ಪರೀಕ್ಷೆಯ ತರಬೇತಿ ಕೇಂದ್ರ ಆರಂಭಿಸಿ ಅದರ ಉದ್ಘಾಟನೆಯನ್ನು ನೆರವೇರಿಸುತ್ತಾರೆ. ಅಂತರ್ ವಿಶ್ವವಿದ್ಯಾಲಯಗಳ ಯುವಜನೋತ್ಸವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಂದಿನ ಕುಲಪತಿಗಳಾಗಿದ್ದ ಎ.ಎಸ್.ಅಡಕೆ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 20-01-1971ರಂದು ಆಯೋಜಿಸಿದಾಗ ಅಂದು ಆರ್.ವಿ.ಬಿಡಪನವರು ಯುವಜನರನ್ನು ಉದ್ದೇಶಿಸಿ ಮಾಡಿದ ಭಾಷಣ ಅತ್ಯಂತ ಯೋಗ್ಯವಾಗಿತ್ತೆಂಬುದು ವಿದ್ವಾಂಸರು ವಿಶ್ಲೇಷಿಸಿದರು. ಆ ಭಾಷಣದ ಒಂದು ಸಾಲು "ಆಟಪಾಠಗಳಲ್ಲಿ ಇಂದು ರಾಜಕಾರಣವಿದೆಯೇ ವಿನಃ ರಾಜಕಾರಣದಲ್ಲಿ ಕ್ರೀಡಾ ಮನೋಭಾವವಿಲ್ಲ" ಎಂಬುದು ಬಹುಮುಖ್ಯವಾಗಿದೆ. 1972ರ ಜನವರಿ 17 ಮತ್ತು 18 ರಂದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ "ಸಂಪ್ರದಾಯದಿಂದ ಹಿಡಿದು ಪ್ರಜಾಸತ್ತಾತ್ಮಕ ಸಮಾಜವಾದದವರೆಗೆ" ಎಂಬ ವಿಷಯ ಕುರಿತು ಎರಡು ದಿನಗಳ ವಿಚಾರ ಸಂಕಿರಣ ಅಂದಿನ ರಾಜಕೀಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಜಿ.ಎಸ್.ಹಾಲಪ್ಪನವರು ಆಯೋಜಿಸಿದ್ದರು. ಅಂದು ಕುಲಪತಿ ಎ.ಎಸ್.ಅಡಕೆ ಅಧ್ಯಕ್ಷತೆಯಲ್ಲಿ ನಡೆದ ಸಂಕೀರ್ಣದಲ್ಲಿ ಆರ್.ವಿ.ಬಿಡಪನವರು ಎರಡು ಉಪನ್ಯಾಸಗಳನ್ನು ನೀಡುತ್ತಾರೆ. ಈ ಉಪನ್ಯಾಸಗಳು ವಿದ್ವಾಂಸರನ್ನು ಆಕರ್ಷಿಸುತ್ತವೆ. ಇದರಿಂದಾಗಿ ಈ ಎರಡು ಉಪನ್ಯಾಸ ಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾರೆ. ಈ ಪುಸ್ತಕದ ಪ್ರತಿ ಅಮೇರಿಕಾದ ಪ್ರಸಿದ್ಧ ವಾಚನಾಲಯದಲ್ಲಿ ಇಂದಿಗೂ ಇದ್ದದ್ದು ಹೆಮ್ಮೆಯ ವಿಷಯವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಿದಂತೆ ಆರ್.ವಿ.ಬಿಡಪನವರು ಮೈಸೂರು ವಿಶ್ವವಿದ್ಯಾಲಯದ ರಾಜಕೀಯಶಾಸ್ತ್ರ ವಿಭಾಗದಲ್ಲಿ ದಿನಾಂಕ 21-02-1973 ರಂದು ರಾಜಕುಮಾರ ನರಸಿಂಹದತ್ತ ಒಡೆಯರ ಉಪಸ್ಥಿತಿಯಲ್ಲಿ ಆರ್.ವಿ.ಬಿಡಪನವರು ಉಪನ್ಯಾಸ ನೀಡಿದ್ದು ವಿಶೇಷ ಎನಿಸಿದೆ. ಮುಂದುವರೆದು ಕೇಂದ್ರ ಲೋಕಸೇವಾ ಆಯೋಗದ ಅಂದಿನ ಅಧ್ಯಕ್ಷರಾದ ಆರ್.ಸಿ.ಸರ್ಕಾರ ಅವರ ನೇತೃತ್ವದಲ್ಲಿ ದಿನಾಂಕ 21-11-1972 ರಂದು ಉತ್ತರಪ್ರದೇಶ ಮತ್ತು ನಾಗಾಲ್ಯಾಂಡ್ ರಾಜ್ಯಗಳ ಲೋಕಸೇವಾ ಆಯೋಗಗಳ ಅಧ್ಯಕ್ಷರೊಂದಿಗೆ ಅಂದಿನ ಭಾರತದ ಪ್ರಧಾನಿ ಇಂದಿರಾಗಾಂಧಿಯವರನ್ನು ಆರ್.ವಿ.ಬಿಡಪನವರು ಭೇಟಿ ಮಾಡಿ ಲೋಕಸೇವಾ ಆಯೋಗಗಳ ಭವಿಷ್ಯದ ಬಗ್ಗೆ ಚರ್ಚೆ ಮಾಡಿದ್ದು ಸ್ಮರಣೀಯ ಎನಿಸಿದೆ.

ಲೋಕಸೇವಾ ಆಯೋಗದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬೇಕೆಂಬ ನಿಟ್ಟಿನಲ್ಲಿ ಯೋಚಿಸಿ ಭಾರತದ ವಿವಿಧ ರಾಜ್ಯಗಳಲ್ಲಿ ಲೋಕಸೇವಾ ಆಯೋಗಗಳ ಸಾಧನೆಗಳನ್ನು ಅಭ್ಯಸಿಸಲು ಆರ್.ವಿ.ಬಿಡಪನವರು ಪ್ರವಾಸ ಕೈಗೊಳ್ಳುತ್ತಾರೆ. ದಿನಾಂಕ 21-08-1972 ರಿಂದ ಭಾರತ ಪ್ರವಾಸ ಆರಂಭಿಸಿ ಉತ್ತರದ ರಾಜ್ಯಗಳಾದ ಕಾಶ್ಮೀರ, ಪಂಜಾಬ,

Scanned with CamScan

ರಾಜಸ್ಥಾನ ಮತ್ತು ದಕ್ಷಿಣದ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಕೇರಳ ರಾಜ್ಯಗಳ ಲೋಕಸೇವಾ ಆಯೋಗಗಳ ಸಾಧನೆ ಬಗ್ಗೆ ತಿಳಿದುಕೊಳ್ಳುತ್ತಾರೆ. 1974ರ ನವೆಂಬರ್ 16 ಮತ್ತು 17 ರಂದು ಅಖಿಲ ಭಾರತ ಲೋಕಸೇವಾ ಆಯೋಗಗಳ ಅಧ್ಯಕ್ಷರ ಸಮ್ಮೇಳನ ದೆಹಲಿಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಆರ್.ವಿ.ಬಿಡಪನವರು ಭಾಗವಹಿಸುತ್ತಾರೆ. ಅಲ್ಲಿ ಭಾರತದ ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮ್ಮದ್ ಅವರು ಎಲ್ಲ ಅಧ್ಯಕ್ಷರಿಗೆ ಗೌರವಾರ್ಥವಾಗಿ ಔತಣ ಕೂಟ ಏರ್ಪಡಿಸಿದ್ದು ಮಹತ್ವ ಪಡೆಯಿತು.

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ಆರ್.ವಿ.ಬಿಡಪ್ಪನವರು ದಿನಾಂಕ 20-03-1967 ರಂದು ನೇಮಕಗೊಳ್ಳುತ್ತಾರೆ. ಇವರ ಕ್ರಿಯಾಶೀಲ ನಡತೆಯಿಂದಾಗಿ ದಿನಾಂಕ 15-02-1969 ರಂದು ಸರ್ವಾನುಮತದಿಂದ ಆಯೋಗದ ಅಧ್ಯಕ್ಷರಾಗಿ ನೇಮಕಾತಿ ಹೊಂದುತ್ತಾರೆ. ಅಂದಿನ ರಾಜ್ಯದ ಮುಖ್ಯಮಂತ್ರಿ ದೇವರಾಜ ಅರಸ್ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ದಿನಾಂಕ 17-03-1973 ರಂದು ಆಯೋಗದ ಹೊಸ ಅಧ್ಯಕ್ಷರಾಗಿ ನೇಮಕ ಮಾಡುವ ಪ್ರಕ್ರಿಯೆ ಬಗ್ಗೆ ವಿಚಾರ ವ್ಯಕ್ತಪಡಿಸುತ್ತಾರೆ. ಸಂವಿಧಾನದ ಪ್ರಕಾರ ಲೋಕಸೇವಾ ಆಯೋಗದ ಅಧ್ಯಕ್ಷರ ಕಾಲಾವಧಿ ಅವರ ಅಧ್ಯಕ್ಷತೆ ವಹಿಸಿದ ದಿನದಿಂದ ಆರು ವರ್ಷಗಳವರೆಗೆ ಇರುವ ವಿಷಯವನ್ನು ಗಮನಿಸದೆ ಸದಸ್ಯರಾದ ದಿನದಿಂದ ಪರಿಗಣಿಸಿ ಆರ್.ವಿ.ಬಿಡಪ ಅವರನ್ನು ನಿವೃತ್ತಗೊಳಿಸಲು ನಿರ್ಧಾರವಾಗುತ್ತದೆ. ಕೂಡಲೇ ಆರ್.ವಿ.ಬಿಡಪನವರು ಸರ್ಕಾರದ ವಿರುದ್ಧ ರಿಟ್ ಅರ್ಜಿ ಸಲ್ಲಿಸಿ ಸಂವಿಧಾನದ ವಿಷಯವನ್ನು ಸುಪ್ರಿಂಕೋರ್ಟ್ ಗಮನಕ್ಕೆ ತರುತ್ತಾರೆ. ಬಿಡಪನವರ ನಿಲುವನ್ನು ಸುಪ್ರಿಂಕೋರ್ಟ್ ಎತ್ತಿ ಹಿಡಿಯುತ್ತದೆ. ಮುಂದೆ ಸಂವಿಧಾನದ ಪ್ರಕಾರ 14-02-1975 ರಂದು ಲೋಕಸೇವಾ ಆಯೋಗದ ಅಧ್ಯಕ್ಷ ಪದವಿಯಿಂದ ನಿವೃತ್ತರಾದಾಗ ಆಫೀಸಿನ ಎಲ್ಲ ಸಿಬ್ಬಂದಿ ಅವರನ್ನು ಆರ್.ವಿ.ಬಿಡಪನವರು ಸ್ವತಃ ಭೇಟಿಯಾಗುತ್ತಾರೆ. ನಿರಂತರವಾಗಿ ಎಂಟು ವರ್ಷಗಳ ಅವಧಿಗೆ ಎಲ್ಲ ಸಹೋದ್ಯೋಗಿಗಳೊಂದಿಗೆ ಉತ್ತಮ ಸಂಬಂಧ ಹೊಂದಿದ್ದರಿಂದ ಎಲ್ಲರ ಕಣ್ಣುಗಳಲ್ಲಿ ಕಣ್ಣೀರು ಕಾಣುತ್ತವೆ. ಅವರೊಂದಿಗೆ ಆಪ್ತ ಕಾರ್ಯದರ್ಶಿಗಳಾಗಿ ಶಶಿಲ್ ನರೋಣಾ, ಅಚಲಾ ಮೌಲಿಕ, ಥೆರೆಸಾ ಭಟ್ಟಾಚಾರ್ಯ ಅದೀಬ ಚೌಧರಿ ಕಾರ್ಯ ನಿರ್ವಹಿಸಿದ್ದರು. ಇವರೆಲ್ಲರು ಇಂದಿಗೂ ಆರ್.ವಿ.ಬಿಡಪನವರ ಮಧುರ ಬಾಂಧವ್ಯ, ಹೃದಯವಂತಿಕೆ ಸ್ಮರಿಸುತ್ತ ತುಂಬ ಯೋಗ್ಯ ಮತ್ತು ಒಳ್ಳೆಯ ಅಧ್ಯಕ್ಷರಾಗಿದ್ದರೆಂದು ಬಣ್ಣಿಸುವುದು ಕಂಡುಬರುತ್ತದೆ.

Scanned with CamScanner

# ೧೨. ನಾಡು-ನುಡಿಯ ಸೇವೆ

ಕರ್ನಾಟಕ ಏಕೀಕರಣ ಆಗುವುದಕ್ಕಿಂತ ಪೂರ್ವದಲ್ಲಿ ಬೀದರ ಜಿಲ್ಲೆ ಒಂಬತ್ತು ತಾಲೂಕುಗಳನ್ನು ಹೊಂದಿತ್ತು. ಎಲ್ಲಾ ತಾಲೂಕುಗಳು ಬೀದರ ಜಿಲ್ಲೆಯಲ್ಲಿಯೇ ಇರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಬೀದರ ಜಿಲ್ಲೆಯ ಕನ್ನಡಪರ ಹೋರಾಟಗಾರರು ಒಗ್ಗಟ್ಟಾಗಿ ಹೋರಾಟ ನಡೆಸುತ್ತಾರೆ. ಇವರಲ್ಲಿ ಆರ್.ವಿ.ಬಿಡಪನವರು ನಿರಂತರ ಹೋರಾಟ ಮಾಡುವುದರ ಜೊತೆಗೆ ಕನ್ನಡ ನಾಡು-ನುಡಿಯ ಬಗ್ಗೆ ನಿಜವಾದ ಪ್ರಜ್ಞೆ ಜನರಲ್ಲಿ ಮೂಡಿಸುವವರಲ್ಲಿ ಮುಂಚೂಣಿಯಲ್ಲಿದ್ದರು. 1954ರ ಜೂನ್ 25 ರಂದು ಎಸ್.ನಿಜಲಿಂಗಪ್ಪನವರು ಆರ್.ವಿ.ಬಿಡಪನವರಿಗೆ ಒಂದು ಪತ್ರ ಬರೆಯುತ್ತಾರೆ. ಹೈದ್ರಾಬಾದ ಕರ್ನಾಟಕ ಭಾಗದ ಬೀದರ, ರಾಯಚೂರು, ಗುಲಬರ್ಗಾ ಜಿಲ್ಲೆಗಳನ್ನು ಯಥಾರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿರುವಂತೆ ನೋಡಿಕೊಳ್ಳಲು ರಾಜ್ಯ ಪುನರ್‌ವಿಂಗಡಣಾ ಸಮಿತಿ ಶೀಘ್ರದಲ್ಲಿ ಹೈದ್ರಾಬಾದಗೆ ಬರಲಿದೆ. ಈ ಸಮಿತಿಯ ಮುಖ್ಯಸ್ಥರಾದ ಫಜಲ್ ಅಲಿ ಅವರ ಸಮ್ಮುಖದಲ್ಲಿ ಈ ಮೂರು ಜಿಲ್ಲೆಗಳಲ್ಲಿ ಯಾವುದೇ ಬದಲಾವಣೆಗಳು ಮಾಡದೆ ಈಗಿರುವ ಸ್ಥಿತಿಯಲ್ಲಿಯೇ ಕರ್ನಾಟಕದಲ್ಲಿಯೇ ಇರುವಂತೆ ಆಧಾರಸಹಿತವಾಗಿ ಬಿಂಬಿಸಲು ಕೋರಿಕೆ ಸಲ್ಲಿಸಬೇಕು. ಜೊತೆಗೆ ಈ ಜಿಲ್ಲೆಗಳ ಜನರ ಮನದಲ್ಲಿರುವ ಸಂದೇಹಗಳನ್ನು ನಿವಾರಿಸಿ ಕರ್ನಾಟಕ ಏಕೀಕರಣಕ್ಕೆ ಪರವಾದ ರೀತಿಯಲ್ಲಿ ಜನಾಭಿಪ್ರಾಯ ಮೂಡಿಸಬೇಕೆಂದು ಪತ್ರದಲ್ಲಿ ಸೂಚಿಸಲಾಗಿತ್ತು.

ಇದೇ ವಿಷಯವನ್ನು ಪ್ರಮುಖವಾಗಿರಿಸಿಕೊಂಡು ಮುಂಬೈ ಕರ್ನಾಟಕ ಭಾಗದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡುತ್ತಿದ್ದ ಪ್ರಮುಖರಾದ ಹಳ್ಳಿಕೇರಿ ಗುದ್ಲೆಪ್ಪ ಮತ್ತು ಎಸ್.ಆರ್.ಕಂಠಿ ರಾಜ್ಯ ಪುನರ್‌ವಿಂಗಡಣಾ ಸಮಿತಿಯ ಮುಖ್ಯಸ್ಥ ಫಜಲ್ ಅಲಿ ಅವರಿಗೆ ಸಮರ್ಥವಾಗಿ ವಾಸ್ತವ ಸ್ಥಿತಿಯನ್ನು ಮಂಡಿಸಲು ಬೀದರ ಪಟ್ಟಣಕ್ಕೆ ಆಗಮಿಸುತ್ತಾರೆ. ಬೀದರಗೆ ಆಗಮಿಸಿದ ಇವರು ಮೊದಲು ಬಾಪುಸಾಹೇಬ ದೇಶಪಾಂಡೆ ಅವರ ನಿವಾಸದಲ್ಲಿರುವ ಕಾಂಗ್ರೆಸ್ ಕಚೇರಿಗೆ ಭೇಟಿ ಕೊಡುತ್ತಾರೆ. ಆದರೆ ಅಲ್ಲಿ ಏಕೀಕರಣದ ಸಲುವಾಗಿ ಅಂತಹ ಉತ್ಸಾಹ ಕಂಡುಬರದ ಕಾರಣದಿಂದಾಗಿ

Scanned with CamScanner

ಪ್ರಜಾಸಮಾಜವಾದಿ ಪಕ್ಷದ ಕನ್ನಡ ನಾಡು-ನುಡಿಯ ಬಗ್ಗೆ ಅಪಾರ ಪ್ರೀತಿ ಹೊಂದಿದ ಆರ್.ವಿ.ಬಿಡಪನವರಿಗೆ ಭೇಟಿ ಆಗುತ್ತಾರೆ. ಅಲ್ಲಿ ಕರ್ನಾಟಕ ಏಕೀಕರಣದ ಕುರಿತಾದ ಉತ್ಸಾಹ ಭರಿತ ಚಟುವಟಿಕೆಗಳನ್ನು ಕಂಡು ಹಳ್ಳಿಕೇರಿ ಗುದ್ಲೆಪ್ಪ ಮತ್ತು ಎಸ್.ಆರ್.ಕಂಠಿ ಅವರಿಗೆ ಅತೀವ ಸಂತಸ ಮತ್ತು ಹೆಮ್ಮೆ ಎನಿಸುತ್ತದೆ. ಆರ್.ವಿ.ಬಿಡಪ ಅವರ ಜೊತೆಗೂಡಿ ಕರ್ನಾಟಕ ಏಕೀಕರಣದ ಹೋರಾಟಕ್ಕೆ ಸಂಬಂಧಿಸಿದಂತೆ ಮುಂದೆ ಇಡಬೇಕಾದ ಯಶಸ್ವಿ ಹೆಜ್ಜೆಗಳ ಕುರಿತು ಯೋಜನೆ ರೂಪಿಸುತ್ತಾರೆ.

ಕರ್ನಾಟಕ ಏಕೀಕರಣ ಹೋರಾಟದ ಮೊದಲ ಭಾಗವಾಗಿ ಬೀದರ ಜಿಲ್ಲೆಯ ವಿವಿಧ ವರ್ಗ, ಜಾತಿ, ಮತ, ಪಂಥ, ಪಕ್ಷಗಳ ಭೇದ ಮರೆತು ಎಲ್ಲಾ ಜನರಲ್ಲಿ ಕರ್ನಾಟಕ ಏಕೀಕರಣದ ಮಹತ್ವ ಕುರಿತಾಗಿ ಜಾಗೃತಿ ಮೂಡಿಸಿ ಕರ್ನಾಟಕ ಏಕೀಕರಣದ ಹೋರಾಟ ಯಶಸ್ವಿಗಾಗಿ ಜನರಿಂದ ಸಹಿ ಮಾಡಿದ ಮನವಿ ಪತ್ರಗಳನ್ನು ಆರ್.ವಿ.ಬಿಡಪನವರು ಸಂಗ್ರಹಿಸುತ್ತಾರೆ. ಆ ಎಲ್ಲ ಮನವಿ ಪತ್ರಗಳನ್ನು ದಿನಾಂಕ 13-07-1954 ರಂದು ಬೀದರಗೆ ಬಂದಿದ್ದ ಎಸ್.ಆರ್.ಸಿ. ಕಮೀಟಿಯ ಮುಖ್ಯಸ್ಥರಿಗೆ ಒಪ್ಪಿಸುತ್ತಾರೆ. ಹೋರಾಟದ ಯಶಸ್ವಿಗಾಗಿ ಎರಡು ಬಾರಿ ದೆಹಲಿಗೆ ಹೋಗಿ ಲೋಕಸಭಾ ಸದಸ್ಯರ ಎದುರಿಗೆ ಲಾಬಿ ಮಾಡುತ್ತಾರೆ. ಈ ಸಮಯದಲ್ಲಿ ಆರ್.ವಿ.ಬಿಡಪನವರ ಸಂಗಾತಿಗಳಾದ ಭೀಮಣ್ಣ ಖಂಡ್ರ ಮುಂತಾದವರು ಸಹಕರಿಸುತ್ತಾರೆ. ನಿರಂತರ ಹೋರಾಟಗಳು ನಡೆಯುತ್ತವೆ.

ಕರ್ನಾಟಕ ರಾಜ್ಯ ಪುನರ್‌ವಿಂಗಡಣಾ ಆಯೋಗಕ್ಕೆ ಈ ಭಾಗದ ವಾಸ್ತವಸ್ಥಿತಿಯ ಮಾಹಿತಿ ಸಲ್ಲಿಸಿದ ನಂತರದಲ್ಲಿ ಪ್ರಥಮ ಹಂತವಾಗಿ ಆಯೋಗವು ಒಂಬತ್ತು ತಾಲೂಕುಗಳನ್ನೊಳಗೊಂಡ ಬೀದರ ಜಿಲ್ಲೆಯನ್ನು ಭೌಗೋಳಿಕ ಸಂಲಗ್ನತೆಯ ಆಧಾರದ ಮೇಲೆ ಆಂಧ್ರಪ್ರದೇಶಕ್ಕೆ ಸೇರಿಸಲು ಶಿಫಾರಸ್ಸು ಮಾಡುತ್ತದೆ. ಮತ್ತೆ ಕರ್ನಾಟಕ ಏಕೀಕರಣ ಹೋರಾಟ ಚುರುಕುಗೊಳ್ಳುತ್ತದೆ. ಕೊನೆಗೆ ಕರ್ನಾಟಕ ರಾಜ್ಯ ಪುನರ್‌ವಿಂಗಡಣಾ ಆಯೋಗವು ಬೀದರ ಜಿಲ್ಲೆಯ ಒಂಬತ್ತು ತಾಲೂಕುಗಳನ್ನು ವಿಂಗಡಿಸಿ ಮೂರು ಭಾಗಗಳಲ್ಲಿ ಹಂಚಬೇಕೆಂದು ಆದೇಶ ಹೊರಡಿಸುತ್ತದೆ. ಈ ಆದೇಶದನ್ವಯ ಕರ್ನಾಟಕಕ್ಕೆ ಹುಮನಾಬಾದ, ಬೀದರ, ಔರಾದ, ಭಾಲ್ಕಿ ಹೀಗೆ ಕೇವಲ ನಾಲ್ಕು ತಾಲೂಕುಗಳು ಮಾತ್ರ ಉಳಿದು ಆಂಧ್ರಪ್ರದೇಶಕ್ಕೆ ನಾರಾಯಣಖೇಡ, ಜಹಿರಾಬಾದ ಸೇರಿದರೆ ಮಹಾರಾಷ್ಟ್ರಕ್ಕೆ ಲಾತೂರ, ಉದಗೀರ, ಉಮರ್ಗಾ ತಾಲೂಕುಗಳು ಸೇರುತ್ತವೆ. ಕರ್ನಾಟಕಕ್ಕೆ ಸೇರಿದ್ದ ನಾಲ್ಕು ತಾಲೂಕುಗಳನ್ನು ಗುಲಬರ್ಗಾ ಜಿಲ್ಲೆಗೆ ಸೇರಿಸಿ ಬೀದರ ಜಿಲ್ಲೆಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಇರುವುದು ಬೇಡವೆಂಬ ತೀರ್ಮಾನಕ್ಕೆ ಆಯೋಗವು ಬರುತ್ತದೆ. ಆದರೆ ಬೀದರ ಜಿಲ್ಲೆ ಪ್ರತ್ಯೇಕವಾಗಿ ಉಳಿದು ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವೆಂದು ಪರಿಗಣಿಸಲು ಮತ್ತೊಮ್ಮೆ ಹೋರಾಟ ನಡೆಯುತ್ತದೆ. ಆರ್.ವಿ.ಬಿಡಪ ಅವರು ಕೆಲವು ಮುಖಂಡರನ್ನು ಕೂಡಿಕೊಂಡು ನಿರಂತರ ಹೋರಾಟ ಮಾಡಿ ಯಶಸ್ವಿಯಾಗುತ್ತಾರೆ. ಕರ್ನಾಟಕದಲ್ಲಿ ಬೀದರ ಜಿಲ್ಲೆ ನಾಲ್ಕು ತಾಲೂಕುಗಳನ್ನು ಒಳಗೊಂಡು ಪ್ರತ್ಯೇಕವಾಗಿ ಪರಿಗಣಿಸಲ್ಪಡುತ್ತದೆ. ಬೀದರ ಜಿಲ್ಲೆಯು ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವೆಂದು ಉಳಿಯುತ್ತದೆ.

Scanned with CamScan

ಜಿ.ವಿ.ಹಳ್ಳಿಕೇರಿ ಅವರು ಆರ್.ವಿ.ಬಿಡಪ ಅವರಿಗೆ ದಿನಾಂಕ 19-08-1954 ರಂದು ಪತ್ರ ಬರೆದು ಅಭಿನಂದಿಸುತ್ತಾರೆ. ಅದರಂತೆ ದಿನಾಂಕ 19-12-1955 ರಂದು ಎಸ್.ಆರ್.ಕಂಠಿಯವರು ಆರ್.ವಿ.ಬಿಡಪ ಅವರಿಗೆ ಪತ್ರ ಬರೆದು ತಮ್ಮ ಎಲ್ಲ ಹೋರಾಟಗಾರ ಬಂಧುಗಳಿಗೆ ಅಭಿನಂದನೆಗಳು ಮುಂದೆಯೂ ತಮ್ಮ ಹೋರಾಟಗಳು ನಾಡು-ನುಡಿಯ ಸೇವೆಗಾಗಿ ಇರಲಿ ಎಂದು ಕರೆಕೊಡುತ್ತಾರೆ. ಹೀಗೆ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಆರ್.ವಿ.ಬಿಡಪ ಅವರ ಪಾತ್ರ ಪ್ರಮುಖವಾಗಿತ್ತು. ಮುಂದೆ ಬೀದರ ನಗರದಲ್ಲಿ ಕನ್ನಡಪರ ಚಟುವಟಿಕೆಗಳು ಸಕ್ರೀಯವಾಗಿ ನಡೆಯಲು ಯೋಜನೆ ರೂಪಿಸುತ್ತಾರೆ. ಹೈದ್ರಾಬಾದಿನ ಡೆಕ್ಕನ್ ಕ್ರಾನಿಕಲ್ ದಿನಪತ್ರಿಕೆಯ 27-02-1955 ರ ಸಂಚಿಕೆಯಲ್ಲಿ ಪ್ರಕಟವಾದಂತೆ ರಾಜ್ಯ ಸರ್ಕಾರವು ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ತೆಲುಗು ಮತ್ತು ಮರಾಠಿ ಭಾಷೆಗಳನ್ನು ಕೋರ್ಟ್ ಭಾಷೆಯನ್ನಾಗಿ ಹೇರುವ ಸರಕಾರದ ನಿಲುವನ್ನು ಆರ್.ವಿ.ಬಿಡಪ ಕಟುವಾಗಿ ಖಂಡಿಸುತ್ತಾರೆ. ರಾಜ್ಯಪುನರ್ವಿಂಗಡಣಾ ಆಯೋಗದ ವರದಿಯನ್ನು ಕೂಲಂಕುಶವಾಗಿ ಚರ್ಚಿಸಲು ಸರ್ವಪಕ್ಷಗಳ ಸಮ್ಮೇಳನ ದಿನಾಂಕ 13-10-1956 ರಂದು ಆಯೋಜಿಸುತ್ತಾರೆ. ಆಗ ಕನ್ನಡವನ್ನು ಕೋರ್ಟ್ ಭಾಷೆಯನ್ನಾಗಿ ಬಳಸಲು ಸರಕಾರ ಸಮ್ಮತಿಸುತ್ತದೆ. ಮುಂದುವರೆದು ಆರ್.ವಿ.ಬಿಡಪನವರು ತಮ್ಮ ಸಂಗಾತಿಗಳೊಂದಿಗೆ ಕೂಡಿಕೊಂಡು ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ಬೀದರ ಜಿಲ್ಲೆಯಲ್ಲಿ ಆರಂಭಿಸುವ ನಿಟ್ಟಿನಲ್ಲಿ ಯೋಚಿಸಿ ಕಾರ್ಯಪ್ರವೃತ್ತರಾಗುತ್ತಾರೆ. ಹೀಗೆ ಬೀದರ ಭಾಗದಲ್ಲಿ ಕನ್ನಡ ಭಾಷೆ ಗಟ್ಟಿಯಾಗಿ ಉಳಿದು ಬೆಳೆಯಲು ಶ್ರಮಿಸಿದ ಪ್ರಾತಃಸ್ಮರಣೀಯರಲ್ಲಿ ಆರ್.ವಿ.ಬಿಡಪ ಅವರು ಒಬ್ಬರಾಗಿದ್ದು ಹೆಮ್ಮೆಯ ಸಂಗತಿಯಾಗಿದೆ.

■■

Scanned with CamScan